# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1107
2. ಸದಸ್ಯರ ಹೆಸರು : ಶ್ರೀ.ಎಂ.ಎಲ್.ಅನಿಲ್‌ಕುಮಾರ್
3. ಉತ್ತರಿಸಬೇಕಾದ ದಿನಾಂಕ : 25.02.2022
4. ಉತ್ತರಿಸುವ ಸಚಿವರು : ಸಹಕಾರ ಸಚಿವರು

**(ಕೃಷಿ ಇಲಾಖೆಯಿಂದ ವರ್ಗಾವಣೆಯಾದ ಪ್ರಶ್ನೆ)**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಎ.ಪಿ.ಎಂಸಿ. ಕೃಷಿ ಮಾರುಕಟ್ಟೆಯ ಧ್ಯೇಯೋದ್ದೇಶಗಳೇನು; (ವಿವರ ನೀಡುವುದು) | ರಾಜ್ಯದಲ್ಲಿರುವ ಎ.ಪಿ.ಎಂಸಿ. ಕೃಷಿ ಮಾರುಕಟ್ಟೆಯ ಧ್ಯೇಯೋದ್ದೇಶಗಳು ಈ ಕೆಳಕಂಡಂತಿದೆ.<br>• ರಾಜ್ಯದಲ್ಲಿ ಕ್ರಿಯಾಶೀಲ ಮತ್ತು ಸ್ವಾವಲಂಬಿ ಕೃಷಿ ಮಾರಾಟ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದರ ಮೂಲಕ ಕರ್ನಾಟಕದಲ್ಲಿ ವಿಶೇಷವಾಗಿ ರೈತರ ಹಾಗೂ ಎಲ್ಲಾ ಮಾರಾಟ ಆಸಕ್ತರ ಪಾಲುದಾರಿಕೆಯ ಸಮಾನತೆಯ, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು.<br>• ಸಾಕಷ್ಟು ಮೂಲಸೌಕರ್ಯ ಮತ್ತು ಸ್ನೇಹಪರ ವಿದ್ಯುನ್ಮಾನ ವ್ಯವಸ್ಥೆಯ ಮೂಲಕ ಪಾಲುದಾರಿಕೆಯ, ಪಾರದರ್ಶಕತೆಯ ಹಾಗೂ ವೈಜ್ಞಾನಿಕ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು.<br>• ರೈತರು ತಮ್ಮ ಉತ್ಪನ್ನಗಳಿಗೆ ಅತ್ಯುತ್ತಮ ಬೆಲೆ ಪಡೆಯಲು ಸಹಕಾರಿಯಾಗುವಂತೆ ತೊಂದರೆ ಮುಕ್ತ ಮಾರಾಟ ವ್ಯವಸ್ಥೆಯನ್ನು ರೂಪಿಸುವುದು.<br>• ಕೃಷಿ ಉತ್ಪನ್ನಗಳಿಗೆ ನ್ಯಾಯಯುತವಾದ ತೂಕ, ಸ್ಪರ್ಧಾತ್ಮಕ ಬೆಲೆ, ನಿಗಧಿತ ಮಾರುಕಟ್ಟೆ ರಿವಾಜುಗಳು, ಶೀಘ್ರ ಹಣ ಪಾವತಿ ವ್ಯವಸ್ಥೆ ಮತ್ತು ವ್ಯಾಜ್ಯ ತೀರ್ಮಾನ ವ್ಯವಸ್ಥೆ ಕಲ್ಪಿಸುವುದು.<br>• ಮಾಹಿತಿ ತಂತ್ರಜ್ಞಾನ ಬಳಕೆ, ರೈತರಿಗೆ ಪರಿಣಾಮಕಾರಿಯಾಗಿ ಮಾರುಕಟ್ಟೆ ಬೆಲೆ, ಮಾಹಿತಿಯ ಪ್ರಸಾರ ಮತ್ತು ಉತ್ತಮ ಬೆಲೆ ಪಡೆಯುವುದಕ್ಕಾಗಿ ಸ್ಪರ್ಧೆಯನ್ನು ಹೆಚ್ಚಿಸುವುದರ ಮೂಲಕ ದಕ್ಷತೆಯನ್ನು ಹೆಚ್ಚಿಸುವುದು. |
| ಆ | ಕೋಲಾರ ಜಿಲ್ಲೆಯ ಎ.ಪಿ.ಎಂ.ಸಿ. ಕೃಷಿ ಮಾರುಕಟ್ಟೆಯು ಏಶಿಯಾದಲ್ಲೇ 2ನೇ ಅತಿ ದೊಡ್ಡ ಮಾರುಕಟ್ಟೆಯಾಗಿದ್ದು ಸದರಿ ಮಾರುಕಟ್ಟೆಗೆ ಸರಿಯಾದ ಜಾಗವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರವು ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಬಂದಿದೆ.<br>ಕೋಲಾರ ನಗರದಲ್ಲಿರುವ ಎ.ಪಿ.ಎಂ.ಸಿ. ಮಾರುಕಟ್ಟೆಯ ವಿಸ್ತೀರ್ಣ 18 ಎಕರೆ 31 ಗುಂಟೆ ಇರುತ್ತದೆ. ಈ ಮಾರುಕಟ್ಟೆಗೆ ಟೊಮೊಟೊ ಪ್ರಮುಖ ಆವಕವಾಗಿದ್ದು, ಜೂನ್‌ನಿಂದ ಡಿಸೆಂಬರ್‌ವರೆಗಿನ ಸುಗ್ಗಿ ಸಮಯದಲ್ಲಿ ಸುಮಾರು 4000 ಕ್ವಿಂಟಾಲ್‌ಗೂ ಹೆಚ್ಚು ಮಾರುಕಟ್ಟೆಗೆ ಆವಕವಾಗುತ್ತದೆ. ನೂರಾರು ಟ್ರಕ್‌ಗಳ ಓಡಾಟ, ರೈತರು, ಪೇಟೆ ಕಾರ್ಯಕರ್ತರು ಮತ್ತು ಹಮಾಲರು ಹೀಗೆ 5000 ಜನ ಈ ಮಾರುಕಟ್ಟೆಯಲ್ಲಿ ವ್ಯವಹರಿಸುವುದರಿಂದ ಲೋಡಿಂಗ್, ಗ್ರೇಡಿಂಗ್ ಹಾಗೂ ಪ್ಯಾಕಿಂಗ್‌ಗೆ ಸಾಕಷ್ಟು ಸ್ಥಳಾವಕಾಶವಿಲ್ಲದೆ ಸಮಸ್ಯೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ಮಾರುಕಟ್ಟೆ ವಿಸ್ತರಣೆ ತುಂಬಾ ಅವಶ್ಯಕವಾಗಿದ್ದು, ಮಾರುಕಟ್ಟೆ ವಿಸ್ತರಣೆಗಾಗಿ ಕನಿಷ್ಠ 30 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಆದ್ದರಿಂದ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಂತೆ, "ಅರಣ್ಯ ಇಲಾಖೆಗೆ ಸೇರಿದ ಕೋಲಾರ ತಾಲ್ಲೂಕು, ವಕ್ಕಲೇರಿ ಹೋಬಳಿ |

...2

| | | |
|---|---|---|
| | | ಕಪರಸಿದ್ದನಹಳ್ಳಿ ಗ್ರಾಮದ ಸರ್ವೆ ನಂ.08ರಲ್ಲಿ 17 ಎಕರೆ 10 ಗುಂಟೆ ಮತ್ತು ಮಡೇರಹಳ್ಳಿ ಗ್ರಾಮದ ಸರ್ವೆ ನಂ.35ರಲ್ಲಿ 12 ಎಕರೆ 30 ಗುಂಟೆ - ಒಟ್ಟು 30 ಎಕರೆ ಜಮೀನನ್ನು ಕೋಲಾರ ಕೃಷಿ ಮಾರುಕಟ್ಟೆ ಸಮಿತಿಗೆ ವರ್ಗಾಯಿಸಿ ಇದರ ಬದಲಾಗಿ ಕೋಲಾರ ತಾಲ್ಲೂಕು, ಹೋಳೂರು ಹೋಬಳಿ, ನಾಯಕರಹಳ್ಳಿ ಗ್ರಾಮದ ಸರ್ವೆ ನಂ.192ರಲ್ಲಿ 18-03 ಹೆಕ್ಟೇರ್ ಜಮೀನನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಮಂಜೂರಾತಿ ಹಾಗೂ ಅನುಮೋದನೆಗಾಗಿ ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಇವರಿಂದ ದಿನಾಂಕ:30.07.2021ರಂದು ಕಂದಾಯ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ.<br><br>ಮುಂದುವರೆದು, 30 ಎಕರೆ ಅರಣ್ಯ ಜಮೀನನ್ನು ಪಡೆಯುವ ಕುರಿತಂತೆ ದಿನಾಂಕ:16.09.2021ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (FCA), ಇವರಿಗೆ ಆನ್ ಲೈನ್ ಮುಖಾಂತರ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (FCA), ಇವರು ಅರಣ್ಯ ಸಂರಕ್ಷಣಾ ಕಾಯ್ದೆ 1980 ರಂತೆ ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡುವಂತೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ದಿನಾಂಕ:15.02.2022ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯು ಕೇಂದ್ರ ಸರ್ಕಾರದೊಂದಿಗೆ ಸಂಪಹಿಸಿ ಅನುಮೋದನೆ ಪಡೆದು ಒದಗಿಸಿದ ನಂತರ ಕೂಡಲೇ ಅಗತ್ಯ ಕ್ರಮ ವಹಿಸಲಾಗುವುದು. |
| ಇ. | ಕೃಷಿ ಸಂಜೀವಿನಿ ಯೋಜನೆಯಡಿಯಲ್ಲಿ ಸರ್ಕಾರದಿಂದ ನೀಡುವ ಯೋಜನೆಗಳಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಕೃಷಿ ಬೆಳೆಗಳಲ್ಲಿನ ಕೀಟ, ರೋಗ, ಕಳೆ ಬಾಧೆ ನಿರ್ವಹಣೆ, ಸಸ್ಯ ಪೋಷಕಾಂಶಗಳ ಕೊರತೆ, ಮಣ್ಣು ಆರೋಗ್ಯ ಮತ್ತಿತರೆ ತಾಂತ್ರಿಕ ಸಲಹೆಗಳನ್ನು ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಒದಗಿಸುವ ನಿಟ್ಟಿನಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಸ್ಥಾಪನೆಯನ್ನು ಮಾಡಲಾಗಿದ್ದು, ಸದರಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳಿಗೆ "ಕೃಷಿ ಸಂಜೀವಿನಿ" ಎಂದು ನಾಮಕರಣ ಮಾಡಲಾಗಿರುತ್ತದೆ. ಸದರಿ ಕಾರ್ಯಕ್ರಮದಲ್ಲಿ ಯಾವುದೇ ಯೋಜನೆಗಳನ್ನು ಅನುಷ್ಠಾನಗೊಳಿಸ ಲಾಗುತ್ತಿರುವುದಿಲ್ಲ. |
| ಈ. | ಸದರಿ ಕೃಷಿ ಯೋಜನೆಯಡಿಯಲ್ಲಿ ನೀಡುವ ಮೊತ್ತವು ಕಡಿಮೆಯಾಗಿದ್ದು, ಕೆಲ ಯೋಜನೆಗಳ ಮೊತ್ತ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿವೆ; ಇಲ್ಲವಾದ್ದಲ್ಲಿ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ ? (ಪೂರ್ಣ ಮಾಹಿತಿ ಒದಗಿಸುವುದು) | ಸದರಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯಗಳ ಕಾರ್ಯಕ್ರಮದಡಿ ಯಾವುದೇ ಸಹಾಯಧನ/ ಪ್ರೋತ್ಸಾಹಧನವನ್ನು ನೀಡಲಾಗುತ್ತಿರುವುದಿಲ್ಲ. |

ಸಂಖ್ಯೆ: ಸಿಒ 51 ಎಂಆರ್ಇ 2022

(ಎಸ್.ಟಿ.ಸೋಮಶೇಖರ್)

ಸಹಕಾರ ಸಚಿವರು